**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ ಸುರಪುರ**
**ಸಾಃ ಸುರಪುರ**

| | |
|---|---|
| ಸಿ.ಸಿ. ನಂ | 2107/2022 |
| ಸಿ.ಡಬ್ಲ್ಯೂ-3 | ಪಿ.ಡಬ್ಲ್ಯೂ-2 |
| ದಿನಾಂಕ | 24.07.2025 |

| | |
|---|---|
| ಹೆಸರು | ಭೀಮರಾಯ |
| ತಂದೆ/ತಾಯಿ/ಗಂಡನ ಹೆಸರು | ಮರಿಯಪ್ಪ |
| ವಯಸ್ಸು | 35 ವರ್ಷ |
| ಉದ್ಯೋಗ | ಒಕ್ಕಲುತನ |
| ವಾಸ | ದೇವರಗೋನಾಳ |

**ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆ : ಶ್ರೀ ಎಪಿಪಿ ರವರಿಂದ**

ಚಾಸಾ1 ಮತ್ತು 2 ರವರ ಪರಿಚಯ ಇದೆ. ಒಂದು ದಾಖಲಾತಿಯಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ಗುನ್ನೆ ಜಾಗದ ಪಂಚನಾಮೆಯಾಗಿದ್ದು ಅದನ್ನು ಈಗಾಗಲೇ ನಿಪಿ1 ಸಹಿಯನ್ನು ನಿಪಿ1(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಸುಮಾರು 8 ವರ್ಷಗಳ ಹಿಂದೆ ಪೋಲಿಸರ ಹೇಳಿಕೆಯ ಮೇರೆಗೆ ಬಸಲಿಂಗಪ್ಪ ಅವರ ಹೊಲಕ್ಕೆ ಕರೆದು ಪಂಚರು ಸಹಿ ಮಾಡು ಎಂದರು ಸಹಿ ಮಾಡಿದೆ. ಸದರಿ ದಾಖಲಾತಿಯಲ್ಲಿ ಎನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ ಮತ್ತು ಮುದ್ದೆಮಾಲುಗಳನ್ನು ಜಪ್ತುಪಡಿಸಿಕೊಂಡಿಲ್ಲ.

**(ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗಾಗಿ ವಿನಂತಿಸಿದ್ದು ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಶ್ರೀ ಎಪಿಪಿ ರವರಿಂದ**

ದಿನಾಂಕ 09.06.2022 ರಂದು ಪೋಲಿಸರು ನನ್ನನ್ನು ಮತ್ತು ಚಾಸಾ2 ರವರು ಗುನ್ನೆ ಸ್ಥಳಕ್ಕೆ ಕರೆದುಕೊಂಡು ಹೋಗಿ ಬಸಲಿಂಗಪ್ಪರವರ ಹೊಲಕ್ಕೆ ಕರೆದುಕೊಂಡು ಹೋಗಿ ನಮ್ಮ ಸಮಕ್ಷಮ ಪಂಚನಾಮೆ ಮಾಡಿದರು ಎಂದರೆ ಸರಿ. ನ್ಯಾಯಾಲಯದ ಮುಂದಿರುವ ಕಲ್ಲುಗಳನ್ನು ನನ್ನ ಸಮಕ್ಷಮ ಜಪ್ತುಪಡಿಸಿಕೊಂಡಿದ್ದರು ಎಂದರೆ ಸರಿಯಲ್ಲ. ಸದರಿ ಕಾಲಕ್ಕೆ ಪೋಟೋಗಳನ್ನು ತೆಗೆದಿದ್ದರು ಎಂದರೆ ಸರಿ. ಸದರಿ ಪೋಟೋಗಳನ್ನು ನೋಡಿ ಗುರುತಿಸುತ್ತಾರೆ ಕಲರ್ ಪ್ರತಿ

ಇರುವುದರಿಂದ ಅವುಗಳನ್ನು ನಿಶಾನೆಯನ್ನಾಗಿ ಗುರುತಿಸಲು ತಿರಸ್ಕರಿಸಲಾಗಿದೆ. ನಿಪಿ1 ರಲ್ಲಿರುವ ಎಲ್ಲಾ ಅಂಶಗಳನ್ನು ನಮಗೆ ಓದಿ ಹೇಳಿದ ನಂತರ ನಮ್ಮ ಸಹಿಗಳನ್ನು ಪಡೆದಿದ್ದರು ಎಂದರೆ ಸರಿಯಲ್ಲ.

**ಪಾಟೀ ಸವಾಲು ಃ ಶ್ರೀ ವಿ ಎಸ್ ಜೆ ವಕೀಲರಿಂದ**

ನಾವು ದೇವಸ್ಥಾನದಲ್ಲಿ ಕುಳಿತಿದ್ದಾಗ ನಮ್ಮ ಸಹಿಯನ್ನು ಪಡೆದಿದ್ದರು. ನನ್ನ ಸಮಕ್ಷಮ ಪೋಲಿಸರು ಎನು ಮಾಡಿದರು ಎಂದು ನನಗೆ ಗೊತ್ತಿಲ್ಲ ಪೋಲಿಸರು ಹೇಳಿಕೆಯ ಮೇರೆಗೆ ಸಹಿ ಮಾಡಿದ್ದೆ ಎಂದರೆ ಸರಿ.

**ಮರು ವಿಚಾರಣೆ ಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದ ಮುಖಾಂತರ ಬೆರಳಚ್ಚು ಮಾಡಿಸಿ ಸಾಕ್ಷಿದಾರನಿಗೆ ಓದಿ ಹೇಳಲಾಯಿತು)**

ಓ.ಹೇ.ಕೇ. ಸರಿ ಇದೆ.

ಪ್ರ.ದ.ನ್ಯಾ.ದಂಡಾಧಿಕಾರಿಗಳು
ಸುರಪುರ

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ ಸುರಪುರ**
**ಸಾಃ ಸುರಪುರ**

| | |
|---|---|
| ಸಿ.ಸಿ. ನಂ | 2107/2022 |
| ಸಿ.ಡಬ್ಲ್ಯೂ-2 | ಪಿ.ಡಬ್ಲ್ಯೂ-1 |
| ದಿನಾಂಕ | 24.07.2025 |

| | |
|---|---|
| ಹೆಸರು | ಸಕ್ರೆಪ್ಪ |
| ತಂದೆ/ತಾಯಿ/ಗಂಡನ ಹೆಸರು | ಕೊಂಡಪ್ಪ |
| ವಯಸ್ಸು | 40 ವರ್ಷ |
| ಉದ್ಯೋಗ | ಒಕ್ಕಲುತನ |
| ವಾಸ | ದೇವರಗೋನಾಳ |

**ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆ : ಶ್ರೀ ಎಪಿಪಿ ರವರಿಂದ**

ಚಾಸಾ1 ಮತ್ತು 3 ರವರ ಪರಿಚಯ ಇದೆ. ಒಂದು ದಾಖಲಾತಿಯಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ಗುನ್ನೆ ಜಾಗದ ಪಂಚನಾಮೆಯಾಗಿದ್ದು ಅದನ್ನು ನಿಪಿ1 ಸಹಿಯನ್ನು ನಿಪಿ1(ಎ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಸುಮಾರು 4 ವರ್ಷಗಳ ಹಿಂದೆ ಪೋಲಿಸರ ಹೇಳಿಕೆಯ ಮೇರೆಗೆ ಬಸಲಿಂಗಪ್ಪ ಅವರ ಹೊಲಕ್ಕೆ ಕರೆದು ಪಂಚರು ಸಹಿ ಮಾಡು ಎಂದರು ಸಹಿ ಮಾಡಿದೆ. ಸದರಿ ದಾಖಲಾತಿಯಲ್ಲಿ ಎನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ ಮತ್ತು ಮುದ್ದೆಮಾಲುಗಳನ್ನು ಜಪ್ತುಪಡಿಸಿಕೊಂಡಿಲ್ಲ.

**(ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗಾಗಿ ವಿನಂತಿಸಿದ್ದು ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಶ್ರೀ ಎಪಿಪಿ ರವರಿಂದ**

ದಿನಾಂಕ 09.06.2022 ರಂದು ಪೋಲಿಸರು ನನ್ನನ್ನು ಮತ್ತು ಚಾಸಾ3 ರವರು ಗುನ್ನೆ ಸ್ಥಳಕ್ಕೆ ಕರೆದುಕೊಂಡು ಹೋಗಿ ಪಂಚನಾಮೆ ಮಾಡಿದರು ಎಂದರೆ ಸರಿ. ನ್ಯಾಯಾಲಯದ ಮುಂದಿರುವ ಕಲ್ಲುಗಳನ್ನು ನನ್ನ ಸಮಕ್ಷಮ ಜಪ್ತುಪಡಿಸಿಕೊಂಡಿದ್ದರು ಎಂದರೆ ಸರಿಯಲ್ಲ. ಸದರಿ ಕಾಲಕ್ಕೆ ಪೋಟೋಗಳನ್ನು ತೆಗೆದಿದ್ದರು ಎಂದರೆ ಸರಿ. ಸದರಿ ಪೋಟೋಗಳನ್ನು ನೋಡಿ ಗುರುತಿಸುತ್ತಾರೆ ಕಲರ್ ಪ್ರತಿ ಇರುವುದರಿಂದ ಅವುಗಳನ್ನು ನಿಶಾನೆಯನ್ನಾಗಿ ಗುರುತಿಸಲು

ತಿರಸ್ಕರಿಸಲಾಗಿದೆ. ನಿಪಿ1 ರಲ್ಲಿರುವ ಎಲ್ಲಾ ಅಂಶಗಳನ್ನು ನಮಗೆ ಓದಿ ಹೇಳಿದ ನಂತರ ನಮ್ಮ ಸಹಿಗಳನ್ನು ಪಡೆದಿದ್ದರು ಎಂದರೆ ಸರಿಯಲ್ಲ.

**ಪಾಟೀ ಸವಾಲು ಃ ಶ್ರೀ ವಿ ಎಸ್ ಜೆ ವಕೀಲರಿಂದ**

ನನ್ನ ಊರು ದೇವರಗೋನಾಳ. ಮೌನೇಶ್ವರ ದೇವಸ್ಥಾನದಲ್ಲಿ ಇದ್ದೆ. ನನ್ನ ಸಮಕ್ಷಮ ಪೋಲಿಸರು ಎನು ಮಾಡಿದರು ಎಂದು ನನಗೆ ಗೊತ್ತಿಲ್ಲ ಪೋಲಿಸರು ಹೇಳಿಕೆಯ ಮೇರೆಗೆ ಸಹಿ ಮಾಡಿದ್ದೆ ಎಂದರೆ ಸರಿ.

**ಮರು ವಿಚಾರಣೆ ಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದ ಮುಖಾಂತರ ಬೆರಳಚ್ಚು ಮಾಡಿಸಿ ಸಾಕ್ಷಿದಾರನಿಗೆ ಓದಿ ಹೇಳಲಾಯಿತು)**

ಓ.ಹೇ.ಕೇ. ಸರಿ ಇದೆ.

ಪ್ರ.ದ.ನ್ಯಾ.ದಂಡಾಧಿಕಾರಿಗಳು
ಸುರಪುರ